ಬೆಂಗಳೂರಿನ ಹೃದ್ರೋಗ ಆಸ್ಪತ್ರೆಯಲ್ಲಿ ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ನೇಮಕಾತಿ

1248 (1433) ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಶ್ರೀ. ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ "ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗಾಗಿ ಈ ಹಿಂದೆ ಅರ್ಜಿಯನ್ನು ಕರೆಯಲಾಗಿದೆಯೆ;

ಆ) ಹಾಗಿದ್ದಲ್ಲಿ, ಎಷ್ಟು ಹುದ್ದೆಗಳಿಗಾಗಿ ಅರ್ಜಿ ಕರೆಯಲಾಗಿತ್ತು, ಎಷ್ಟು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು; ಅವುಗಳಲ್ಲಿ ಸರಿಯಾದ ಅರ್ಜಿಗಳೆಷ್ಟು; ತಿರಸ್ಕೃತಗೊಂಡ ಅರ್ಜಿಗಳೆಷ್ಟು;

ಇ) ಆ ಹುದ್ದೆಗಳನ್ನು ಈಗಾಗಲೇ ಭರಿಸತಲಾಗಿದೆಯೆ; ಭರಿಸಿದ್ದರೆ, ಯಾವಾಗ ಸಂದರ್ಶನ ನಡೆಸಲಾಯಿತು; ಯಾವ ಆಧಾರದ ಮೇರೆಗೆ ನೇಮಕಾತಿ ಕೈಗೊಳ್ಳಲಾಯಿತು;

ಈ) ನೇಮಕಾತಿ ನಡೆಯದೇ ಇದ್ದಲ್ಲಿ ಕಾರಣಗಳೇನು; ಯಾವಾಗ ನೇಮಕಾತಿ ಕೈಗೊಳ್ಳಲಾಗುವುದು; ಕಾಲಮಿತಿ ತಿಳಿಸುವುದು;

ಉ) ನೇಮಕಾತಿ ಪ್ರಕ್ರಿಯೆಯನ್ನು ಯಾವ ಆಧಾರದ ಮೇರೆಗೆ ನಡೆಸಲಾಗುವುದು?

ಡಾ॥ ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹೌದು

ಆ) 5 ಹುದ್ದೆಗಳನ್ನು ಗೋಸ್ಕರ್ ಬಿಂದುವಿನನ್ವಯ ಕೆಳಕಂಡಂತೆ ವಿಂಗಡಿಸಿ ಕರೆಯಲಾಗಿತ್ತು.

ಪರಿಶಿಷ್ಟ ಜಾತಿ -1, ಪರಿಶಿಷ್ಟ ಪಂಗಡ -1

ಪ್ರವರ್ಗ 2 ಬಿ-1, ಸಾಮಾನ್ಯ ವರ್ಗ-2

3291 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುತ್ತಾರೆ. ಅವುಗಳಲ್ಲಿ 1863 ಅರ್ಜಿಗಳು ಸರಿಯಾಗಿರುತ್ತದೆ. 1428 ಅರ್ಜಿಗಳು ತಿರಸ್ಕೃತಗೊಂಡಿರುತ್ತವೆ.

ಇ) ಬ್ಯಾಕ್‌ಲಾಗ್ ಹುದ್ದೆಗಳನ್ನು ಸರಿದೂಗಿಸುವ ಸಲುವಾಗಿ ಮಾತ್ರ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿದ ಒಟ್ಟು 2 ಹುದ್ದೆಗಳಿಗೆ ಸಲ್ಲಿಸಿದ 1113 ಅಭ್ಯರ್ಥಿಗಳಲ್ಲಿ ಮೆರಿಟ್ ಆಧಾರದ ಮೇಲೆ ಪ್ರಮಾಣ 1:5 ರಂತೆ ಅಭ್ಯರ್ಥಿಗಳನ್ನು ದಿನಾಂಕ : 30-1-2002 ರಂದು ಸಂದರ್ಶನ ನಡೆಸಿ ಆಯ್ಕೆ ಮಾಡಿ ನೇಮಕಾತಿ ಮಾಡಲಾಗಿದೆ.

ಈ) ಪ್ರಕಟಿಸಿದ 5 ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳು ಹೊಸ ಜಯದೇವ ಆಸ್ಪತ್ರೆಗೆ ಇತರೆ 273 ಹುದ್ದೆಗಳೊಂದಿಗೆ ಸೃಷ್ಟಿಯಾಗಿದ್ದು, ಅವುಗಳನ್ನು ಭರ್ತಿ ಮಾಡಲು ಹೆಚ್ಚುವರಿ ಅನುದಾನದ ಅವಶ್ಯವಿರುವುದರಿಂದ, ನೇಮಕಾತಿ ಮಾಡಿರುವುದಿಲ್ಲ.

ಉ) ನೇಮಕಾತಿ ಪ್ರಕ್ರಿಯೆಯನ್ನು ಮೆರಿಟ್‌ನ ಆಧಾರದ ಮೇಲೆ ನಡೆಸಲಾಗುವುದು.

ಮುಂಡರಗಿ ತಾಲ್ಲೂಕಿನಲ್ಲಿ ಕುಡಿಯುವ ನೀರು ಯೋಜನೆಯ ಸರ್ವೆಮಿಷನ್ ಕಾರ್ಯಕ್ರಮ

1249 (481) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) : ಮಾನ್ಯ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬರಗಾಲ ಹಾಗೂ ಫ್ಲೋರೈಡ್ ಅಂಶ ಇರುವಂತಹ ಗ್ರಾಮಗಳಿಗೆ ಸಬ್-ಮಿಷನ್ ಕಾರ್ಯಕ್ರಮದಡಿ ನೀರು ಸರಬರಾಜು ಮಾಡಲು ಸ್ಥಳೀಯ ವಂತಿಕೆ ಶೇ.10 ರಷ್ಟು ವೆಚ್ಚವನ್ನು ಮನ್ನಾ ಮಾಡಿ ಸರ್ಕಾರವೇ ಪೂರ್ಣ ವೆಚ್ಚವನ್ನು ಭರಿಸಲು ಪರಿಶೀಲಿಸಲಾಗುವುದು ಎಂದು ತಿಳಿಸಿದ್ದು ನಿಜವೇ;

ಆ) ಬರಗಾಲ ಪೀಡಿತ, ಕುಡಿಯುವ ನೀರಿಗೆ ತೀವ್ರ ಅಭಾವವಿರುವ ಮತ್ತು ಅತಿ ಹೆಚ್ಚು ಫ್ಲೋರೈಡ್ ಅಂಶ ಇರುವಂತಹ ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಹಿರೇವಡ್ಡಟ್ಟಿ ಹಾಗೂ ಇತರೆ ಗ್ರಾಮಗಳಿಗೆ ಮಂಜೂರಾದ ಕುಡಿಯುವ ನೀರು ಯೋಜನೆಗೆ ಸ್ಥಳೀಯ ವಂತಿಗೆಯನ್ನು ಮನ್ನಾ ಮಾಡಿ ಸರ್ಕಾರವೇ ಪೂರ್ಣವಾಗಿ ಭರಿಸಿ ಕೂಡಲೇ ಕುಡಿಯುವ ನೀರು ವ್ಯವಸ್ಥೆ ಮಾಡುವುದೇ?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ಸಚಿವರು) :

ಅ) ಸಬ್-ಮಿಷನ್ ಕಾರ್ಯಕ್ರಮದಡಿ ಅನುಷ್ಠಾನ ಗೊಳಿಸಬೇಕಾಗಿರುವ ಯೋಜನೆಗಳಿಗಾಗಿ, ಯೋಜನಾ ವೆಚ್ಚದ ಶೇ.10 ರಷ್ಟು ವೆಚ್ಚವನ್ನು, ಪ್ರತಿ ಮನೆಗೆ ರೂ.1000-ಗಳ ಮಿತಿಗೆ ಒಳಪಟ್ಟು ಸ್ಥಳೀಯ ವಂತಿಕೆ ಮುಖಾಂತರ ಸಂಗ್ರಹಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆ) ಮೇಲ್ಕಂಡ ನಿಯಮಾವಳಿಗಳ ಪ್ರಕಾರ, ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಹಿರೇವಡ್ಡಟ್ಟಿ ಹಾಗೂ ಇತರೆ ಗ್ರಾಮಗಳಿಗೆ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ.

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆಗಳು

1250 (483) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಗಳು ವೇಳೆಗೆ ಸರಿಯಾಗಿ ಕೇಂದ್ರ ಸರ್ಕಾರಕ್ಕೆ ಲೆಕ್ಕ ಪತ್ರ ಮಾಹಿತಿ ಕೊಡದೇ ಯೋಜನೆಯ ಹಣ ಬಿಡುಗಡೆಯಾಗಿರುವ ಜಿಲ್ಲೆಗಳ ವಿವರ ಹಾಗೂ ನಿಗದಿಗೊಳಿಸಿದ ಅನುದಾನ, ಬಿಡುಗಡೆ ಆದ ಅನುದಾನದ ವಿವರಗಳನ್ನು ನೀಡುವುದು

ಆ) ಈ ರೀತಿ ಬಿಡುಗಡೆಯಾಗದಿರಲು ಕಾರಣರಾದವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ ಯೋಜನೆಯಡಿಯಲ್ಲಿ 2001-2002 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಮೊದಲನೇ ಕಂತಿನ ಹಣ ಬಿಡುಗಡೆಯಾಗಿದೆ. ಎರಡನೇ ಕಂತಿನ ಹಣ ಬಿಡುಗಡೆಗಾಗಿ ಕೊಡಗು ಜಿಲ್ಲೆಯನ್ನು ಹೊರತುಪಡಿಸಿ ಉಳಿದ್ದೆಲ್ಲಾ ಜಿಲ್ಲೆಗಳ ಪ್ರಸ್ತಾವನೆ ಹಾಗೂ 2000-2001 ನೇ ಆಡಿಟ್ ವರದಿ ಮತ್ತು ಉಪಯುಕ್ತತಾ ಪತ್ರ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಕೊಡಗು ಜಿಲ್ಲೆಯ ಭೌಗೋಳಿಕ ಸನ್ನಿವೇಶ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಕಡಿಮೆ ಇದ್ದು ಹೆಚ್ಚಿನ ಪ್ರಗತಿ ಸಾಧಿಸಲು ಆಗಿರುವುದಿಲ್ಲ. ಇದಲ್ಲದೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳೂ ಸಹ ಬ್ಯಾಂಕ್‌ನಿಂದ ಸಾಲ ಪಡೆಯುವಂತಹ ಯೋಜನೆಗಳನ್ನು ತೆಗೆದುಕೊಳ್ಳಲು ಇಚ್ಚಿಸುವುದಿಲ್ಲ.